ಉದಯವಾಣಿ

**Dated-Friday, 20th, October– 2017** **Pg.No.04**



## ಸನ್ಮಾನ...

ಕೋಲಾರದ ದೇವರಾಜ ಅರಸು ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ಸಭಾಂಗಣದಲ್ಲಿ ನಡೆದ ಮಾಜಿ ಸಂಸದ ಆರ್.ಎಲ್.ಜಾಲಪ್ಪ ಹುಟ್ಟುಹಬ್ಬ ಹಾಗೂ ಆಸ್ಪತ್ರೆ ದಿನಾಚರಣೆ ಕಾರ್ಯಕ್ರಮದಲ್ಲಿ ಆಸ್ಪತ್ರೆಯ ವೈದ್ಯರು, ವೈದ್ಯಕೀಯೇತರ ಸಿಬ್ಬಂದಿ ಸೇವೆಯನ್ನು ಗುರುತಿಸಿ ಸನ್ಮಾನಿಸಲಾಯಿತು.

ಸಂಯುಕ್ತ ಕರ್ನಾಟಕ





# ಜಾಲಪ್ಪ ಹುಟ್ಟು ಹಬ್ಬ: ಹಣ್ಣು ವಿತರಣೆ

**ಗೌರಿಬಿದನೂರು:** ಕೇಂದ್ರದ ಮಾಜಿ ಸಚಿವ ಆರ್.ಎಲ್.ಜಾಲಪ್ಪರವರ 92 ನೆಯ ಹುಟ್ಟು ಹಬ್ಬದ ಪ್ರಯುಕ್ತ ಜಾಲಪ್ಪನವರ ಅಭಿಮಾನಿಗಳು ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಆರ್.ಅಶೋಕ್‌ಕುಮಾರ್ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು-ಹಂಪಲು ವಿತರಣೆ ಮಾಡಿದರು.

ಬಳಿಕ ಮಾತನಾಡಿದ ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಆರ್. ಅಶೋಕ್‌ಕುಮಾರ್ ಜಾಲಪ್ಪನವರು ರಾಜ್ಯ ಕಂಡ ವಿಶಿಷ್ಟ ರಾಜಕಾರಣಿ. ಕೇವಲ ಅಧಿಕಾರಕ್ಕಾಗಿ ಅವರು ರಾಜಕಾರಣವನ್ನು ಮಾಡದೆ, ಜನರ ಸೇವೆಗಾಗಿ ರಾಜ-ಕಾರಣವನ್ನು ಮಾಡಿದರು. ತಮ್ಮ ಕ್ಷೇತ್ರದ ಜನರ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ನಿತ್ಯ ಹಂಬಲಿಸುತ್ತಿದ್ದರು ಎಂದರು.ಅವರು ವಿಧಾನ ಸಭೆಗೆ ಆರಿಸಿ ಬಂದಾಗ ದೊಡ್ಡಬಳ್ಳಾಪುರ ಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗಾರಿಕಾ ಪ್ರದೇಶವನ್ನು ಸ್ಥಾಪನೆ ಮಾಡಿ ಲಕ್ಷಾಂತರ ಕುಟುಂಬಗಳ ಬದುಕಿಗೆ ದಾರಿ ಮಾಡಿಕೊಟ್ಟರು. ಸಂಸತ್‌ಗೆ ಆಯ್ಕೆಯಾದಾಗ ಕ್ಷೇತ್ರದಲ್ಲಿ ಹಲವು ನೀರಾವರಿ ಯೋಜನೆಗಳನ್ನು ರೂಪಿಸಿ ಕೃಷಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಟ್ಟರು. ಈ ಮೂಲಕ ಅವರು ಆದರ್ಶ ರಾಜಕಾರಣಿ ಎಂಬ ಕೀರ್ತಿಗೆ ಒಳಗಾಗಿದ್ದಾರೆ. ಇವರು ದೀರ್ಘಾಯುಸ್ಸುಗಳಾಗಲಿ ಎಂದು ಆಶಿಸಿದರು.ಕಾರ್ಯಕ್ರಮದಲ್ಲಿ ಬಿಜೆಪಿಯ ಡೈರಿ ರಮೇಶ್, ಕಸಾಪ ತಾಲ್ಲೂಕು ಅಧ್ಯಕ್ಷ ವಿ.ರವೀಂದ್ರನಾಥ್, ಕಾಂಗ್ರೆಸ್ ಮುಖಂಡ ಬಿ.ಜಿ.ವೇಣುಗೋಪಾಲರೆಡ್ಡಿ, ವಕೀಲರ ಸಂಘದ ಅಧ್ಯಕ್ಷ ರಾಮದಾಸ್, ಕಲ್ಲಿನಾಯಕನಹಳ್ಳಿ ಗೋಪಿ, ಕರವೇ ಬಷೀರ್, ಬ್ಯಾಂಕ್ ಮಂಜು ಮುಂತಾದವರು ಇದ್ದರು.

ಕನ್ನಡಪ್ರಭ



ಮಾಜಿ ಸಂಸದ ಜಾಲಪ್ಪ ಹುಟ್ಟುಹಬ್ಬ ಹಾಗೂ ಆಸ್ಪತ್ರೆ ದಿನಾಚರಣೆಯಲ್ಲಿ ವಿ.ಎಸ್.ಉಗ್ರಪ್ಪ

# ವೈದ್ಯರು ವೃತ್ತಿ ಮೌಲ್ಯ ಮರೆಯಬಾರದು

• **ಕನ್ನಡಪ್ರಭ ವಾರ್ತೆ** ಕೋಲಾರ

ಅನೇಕ ವೈದ್ಯರು ತಮ್ಮ ವೃತ್ತಿ ಮೌಲ್ಯಗಳನ್ನು ಕಳೆದುಕೊಳ್ಳುತ್ತಿರುವುದರಿಂದ ಭ್ರೂಣ ಹತ್ಯೆ ಮೂಲಕ ಸಮಾಜದ ಸ್ವಾಸ್ಥ್ಯ ನಾಶಕ್ಕೆ ಕಾರಣರಾಗುತ್ತಿದ್ದಾರೆ ಎಂದು ರಾಜ್ಯ ಮಹಿಳಾ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆ ಸಮಿತಿ ಅಧ್ಯಕ್ಷ ವಿ.ಎಸ್.ಉಗ್ರಪ್ಪ ವಿಷಾದಿಸಿದರು.

ನಗರದ ದೇವರಾಜ ಅರಸು ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ಸಭಾಂಗಣದಲ್ಲಿ ಮಾಜಿ ಸಂಸದ ಜಾಲಪ್ಪ ಹುಟ್ಟುಹಬ್ಬ ಹಾಗೂ ಆಸ್ಪತ್ರೆ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ವೈದ್ಯ ದೇವೋಭವ ಎಂಬ ಭಾವನೆಗೆ ನಾವು ಅರ್ಹರೆ ಎಂಬುದನ್ನು ವೈದ್ಯರು ತಮ್ಮ ಆತ್ಮಸಾಕ್ಷಿಗೆ ಪ್ರಶ್ನಿಸಿಕೊಳ್ಳಬೇಕು. ಈ ಗೌರವಕ್ಕೆ ಪಾತ್ರರಾದವರು ಎಷ್ಟು ಮಂದಿ ಇದ್ದಾರೆ ಎಂದು ಪ್ರಶ್ನಿಸಿ, ವೃತ್ತಿ ಮೌಲ್ಯ ಮರೆತು ಹಣಕ್ಕಾಗಿ ಎಲ್ಲಾ ಎನ್ನುವಂತಾಗಿದೆ ಎಂದರು.

**ಮಹಿಳೆಯ ಸಂಖ್ಯೆ ಕುಸಿತ:** ದೇಶದಲ್ಲಿ ಲಿಂಗಾನುಪಾತ ವ್ಯತ್ಯಾಸದಿಂದಾಗಿ ಮುಂದಿನ ಸಮಾಜದ ಸ್ವಾಸ್ಥ್ಯ ಹಾಳಾಗುವ ಎಲ್ಲಾ ಲಕ್ಷಣಗಳು ಇವೆ, ಇದಕ್ಕೆ ವೈದ್ಯರು ತಮ್ಮ ಮೌಲ್ಯಗಳನ್ನು ಮರೆತಿರುವುದು ಮತ್ತು ಪೋಷಕರಲ್ಲಿ ಗಂಡು ಮಗುವಿನ ಪ್ರೇಮವೇ ಕಾರಣ. 2001ರ ಗಣತಿ ಆಧಾರದಲ್ಲಿ ಲಿಂಗಾನುಪಾತ 1000 ಪುರುಷರಿಗೆ 1019 ಮಹಿಳೆಯರ ಸಂಖ್ಯೆ ಇತ್ತು. ಆದರೆ ಈಗ 1000ಕ್ಕೆ 880ಕ್ಕೆ ಕುಸಿದಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಲಿಕ್ಕರ್ ವ್ಯವಹಾರ ಮಾಡಿಕೊಂಡು ಬಡ ಕುಟುಂಬದಲ್ಲಿ ಜೀವನ ನಡೆಸುತ್ತಿದ್ದ ಜಾಲಪ್ಪ ಅರಸು ಅವರ ಹೆಸರಿನಲ್ಲಿ ಇಂದು ಪ್ರಾಥಮಿಕ ಹಂತದಿಂದ ಪಿಜಿ ವರೆಗೂ ವಿವಿಧ ಶಿಕ್ಷಣ ಸಂಸ್ಥೆ ಮಾಡಿದ್ದಾರೆ. 1000 ರೋಗಿಗಳ ಆಸ್ಪತ್ರೆ ಮಾಡಿ ಉಚಿತ ಊಟ ನೀಡಿ ಸೇವೆ ಮುಂದುವರೆಸಿದ್ದಾರೆ ಎಂದರು.

**ವೈದ್ಯರು, ಸಿಬ್ಬಂದಿಗೆ ಸನ್ಮಾನ:** ಕಾರ್ಯಕ್ರಮದಲ್ಲಿ ಹಿರಿಯ ತಜ್ಞರಾದ ಡಾ.ಲಕ್ಷ್ಮಯ್ಯ, ಡಾ.ರಾಘವೇಂದ್ರಪ್ರಸಾದ್, ಡಾ. ಭಾಸ್ಕರನ್, ರಾಮದಾಸ್, ಕೃಷ್ಣಪ್ರಸಾದ್, ಡಾ. ರವಿಕುಮಾರ್, ಡಾ.ಶ್ರೀನಾಥ್, ಡಾ. ವೆಂಕಟರತ್ನಮ್ಮ, ಡಾ.ಗೋವಿಂದರಾಜು, ಕೆ. ಪ್ರಭಾಕರ್, ಡಾ.ಶೀಲಾ, ಜಗದೀಶ್, ಮುನಿಕೃಷ್ಣ, ಜಗನ್ನಾಥ್, ಅಶ್ವತ್ಥ ನಾರಾಯಣ, ವೈದ್ಯಕೀಯೇತರ ಸಿಬ್ಬಂದಿಯಾದ ಶಿಲ್ಪಿ ಎಂಜಿನಿಯರ್ ಹನುಮಂತರಾವ್, ಕೆ.ಎನ್.ಶ್ರೀನಿವಾಸಮೂರ್ತಿ, ಪ್ರಶಾಂತ್, ದೇವಪ್ರಿಯಾ, ಸತೀಶ್, ಚಂದ್ರಶೇಖರ್, ರವಿಕುಮಾರ್, ಮುನಿಯಮ್ಮ, ಲಕ್ಷ್ಮಮ್ಮ ಮತ್ತಿತರರನ್ನು ಸನ್ಮಾನಿಸಲಾಯಿತು.



ಕೋಲಾರದ ದೇವರಾಜ ಅರಸು ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ಸಭಾಂಗಣದಲ್ಲಿ ಆಸ್ಪತ್ರೆ ದಿನಾಚರಣೆಯನ್ನು ರಾಜ್ಯ ಮಹಿಳಾ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆ ಸಮಿತಿ ಅಧ್ಯಕ್ಷ ವಿ.ಎಸ್.ಉಗ್ರಪ್ಪ ಉದ್ಘಾಟಿಸಿದರು.

ಕನ್ನಡಪ್ರಭ





ಕೋಲಾರದ ದೇವರಾಜ ಅರಸು ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ಸಭಾಂಗಣದಲ್ಲಿ ಮಾಜಿ ಸಂಸದ ಜಾಲಪ್ಪ ಹುಟ್ಟುಹಬ್ಬ ಹಾಗೂ ಆಸ್ಪತ್ರೆ ದಿನಾಚರಣೆಯಲ್ಲಿ ಉತ್ತಮ ಸೇವೆ ಸಲ್ಲಿಸಿದ ಆಸ್ಪತ್ರೆಯ ವೈದ್ಯರು, ವೈದ್ಯಕೀಯೇತರ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು.